**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂ:211/2018 ಪಿ.ಡಬ್ಲೂ: 01**

ಸಾಕ್ಷಿಯನ್ನು ಇಂದು ದಿನಾಂಕ: **25.05.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲು:** ಪ್ರತಿವಾದಿಗಳ ಪರ ಶ್ರೀ ಬಿ.ಎಂ.ಎನ್ ವಕೀಲರಿಂದ:

ದಾವಾ ಆಸ್ತಿಯಲ್ಲಿ ನಿವೇಶನಗಳನ್ನು ನಿರ್ಮಿಸಲು ತಹಶೀಲ್ದಾರರರಿಂದ ಆದೇಶವನ್ನು ಪಡೆದುಕೊಂಡಿರುವುದಿಲ್ಲ. ನಾನು ಸಲ್ಲಿಸಿರುವ ನಿಪಿ-**3** ರಿಂದ **5** ಫೋಟೋಗಳನ್ನು ತೆಗೆದು ಸುಮಾರು **2** ರಿಂದ **3** ತಿಂಗಳುಗಳು ಆಗಿರುತ್ತವೆ. ದಾವಾ ಆಸ್ತಿಯನ್ನು ಮನೆ ಎಂದು ನಾನು ಈ ದಾವೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಮನೆ ಎಂದು ಈ ದಾವೆಯಲ್ಲಿ ತಿಳಿಸಿಲ್ಲದ ಕಾರಣ ನಾನು ಸಲ್ಲಿಸಿರುವ ನಿಪಿ-**2** ರಿಂದ ನಿಪಿ-**6** ದಾಖಲೆಗಳಿಗೂ ಹಾಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-**7** ಕಂದಾಯ ರಸೀದಿಯಲ್ಲಿ ದಾವಾ ಆಸ್ತಿಯ ಸರ್ವೇ ನಂಬರ ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ-**8** ಡಿಮ್ಯಾಂಡ ರಿಜಿಸ್ಟರ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ದಾಖಲೆಯಲ್ಲಿ ಆಸ್ತಿಯ ಅಳತೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನಾನು ಸಲ್ಲಿಸಿರುವ ನಿಪಿ-**8** ದಾಖಲೆಯಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ. ನಾನು ಜಂಜರ್ ನಂ.**57** ಆಸ್ತಿ ಸಂ.**48**/ಬಿ ಸ್ವತ್ತಿಗೆ ಸಂಬಂಧಿಸಿದಂತೆ ದಾವೆಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ:

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**